ರಾಜ್ಯದಲ್ಲಿ ರಚಿಸಲಾಗಿರುವ ಗ್ರಾಮ ರಕ್ಷಣಾ ದಳಗಳ ಸಂಖ್ಯೆ

1375 (1635) ಮಾನ್ಯ ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿ 31- 12- 99ಕ್ಕೆ ಜಿಲ್ಲಾವಾರು ರಚಿಸಲಾಗಿರುವ ಗ್ರಾಮ ರಕ್ಷಣಾ ದಳಗಳ ಸಂಖ್ಯೆ ಎಷ್ಟು ;

2) ರಾಜ್ಯದಲ್ಲಿ ದಳಪತಿಗಳಿಗೆ 96- 97, 97- 98 ಹಾಗೂ 98- 99ರಲ್ಲಿ ಕೊಟ್ಟ ಗೌರವ ಧನ ಸಂಭಾವನೆ ಮೊತ್ತ ಎಷ್ಟು ;

3) ರಾಜ್ಯದಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಇನ್ನೂ ಗೃಹ ರಕ್ಷಕದಳಗಳನ್ನು ರಚಿಸಿಲ್ಲ ಆ ತಾಲ್ಲೂಕುಗಳಾವುವು ;

4) ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿ ಗೃಹ ರಕ್ಷಕ ದಳ ರಚಿಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

1) ರಾಜ್ಯದಲ್ಲಿ ಒಟ್ಟು 17,563 ಗ್ರಾಮ ರಕ್ಷಣಾ ದಳಗಳನ್ನು ರಚಿಸಲಾಗಿದೆ. ಜಿಲ್ಲಾವಾರು ವಿವರ ಅನುಬಂಧ 'ಎ'ರಲ್ಲಿ ನೀಡಲಾಗಿದೆ.

2) ಯಾವುದೇ ಗೌರವಧನ ಅಥವಾ ಸಂಭಾವನೆ ನೀಡಿಲ್ಲ.

3) ರಾಜ್ಯದ ಹುಬ್ಬಳ್ಳಿ- ಧಾರವಾಡ ಮಹಾನಗರ ಬೆಂಗಳೂರು ನಗರ ಮತ್ತು ಮೈಸೂರು ನಗರಗಳನ್ನು ಹೊರತುಪಡಿಸಿ ಎಲ್ಲಾ ತಾಲ್ಲೂಕುಗಳಲ್ಲಿ ಗ್ರಾಮ ರಕ್ಷಣಾ ದಳಗಳನ್ನು ರಚಿಸಿದೆ.

4) ಅಗತ್ಯಕನುಸಾರವಾಗಿ ಗ್ರಾಮ ರಕ್ಷಣಾ ದಳ ರಚಿಸಲು ಪರಿಶೀಲಿಸಲಾಗುವುದು.

ಅನುಬಂಧ - ಎ

ಕ್ರಮ ಸಂಖ್ಯೆ	ಜಿಲ್ಲೆ	ಗ್ರಾಮ ರಕ್ಷಣಾ ದಳಗಳ ಸಂಖ್ಯೆ
1	2	3
1.	ಬೆಂಗಳೂರು ಜಿಲ್ಲೆ	952
2.	ಮೈಸೂರು ಜಿಲ್ಲೆ	864
3.	ಮೈಸೂರು ನಗರ	16
4.	ಕೋಲಾರ ಜಿಲ್ಲೆ	647
5.	ಕೆ. ಜಿ. ಎಫ್	202
6.	ಹಾಸನ	1875

1	2	3
7.	ಕೊಡಗು	127
8.	ಚಿತ್ರದುರ್ಗ	901
9.	ಶಿವಮೊಗ್ಗ	1548
10.	ಬಳ್ಳಾರಿ	714
11.	ಮಂಗಳೂರು	668
12.	ಚಿಕ್ಕಮಗಳೂರು	551
13.	ಉತ್ತರ ಕನ್ನಡ (ಕಾರವಾರ)	764
14.	ಬೆಳಗಾವಿ	790
15.	ಬಿಜಾಪುರ	629
16.	ಧಾರವಾಡ	56
17.	ಗುಲ್ಬರ್ಗಾ	1210
18.	ಬೀದರ್	580
19.	ರಾಯಚೂರು	766
20.	ಚಾಮರಾಜನಗರ	513
21.	ಬಾಗಲಕೋಟೆ	603
22.	ಕೊಪ್ಪಳ	534
23.	ಹಾವೇರಿ	127
24.	ಗದಗ್	169
25.	ದಾವಣಗೆರೆ	367
26.	ಉಡುಪಿ	51
27.	ತುಮಕೂರು	928
28.	ಮಂಡ್ಯ	411
	ಒಟ್ಟು	**17,563**